Repairs of breached Tanks in Chikmagalur.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು–ಮೂಡಿಗೆರೆ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ :—

"18 ಸಾಮಾನ್ಯ ಹುಟ್ಟುವಳಿಯಿಂದ ಹಣ ವನ್ನೊದಗಿಸತಕ್ಕ ಇತರ ರೆವೆನ್ಯೂ ವೆಚ್ಚಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 61,09,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಕಳೆದ ಮಳೆಗಾಲದಲ್ಲಿ ವಿಪರೀತ ಮಳೆ ಬಿದ್ದುದರಿಂದ ಒಡೆದು ಹೋದ ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಕೂಡಲೆ ಕಾರ್ಯಕ್ರಮ ಕೈಕೊಳ್ಳ ಬೇಕೆಂದು ಸರ್ಕಾರದವರಿಗೆ ಒತ್ತಿ ತಿಳಿಸುವುದ ಕ್ಕಾಗಿ)."

ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಕಳೆದ ವರ್ಷ ವಿಶೇಷವಾಗಿ ಮಳೆಯಾದುದರ ಪರಿಣಾಮವಾಗಿ ಕೆಲವು ಕೆರೆಗಳು ಒಡೆದುಹೋಗಿವೆ. ಅವುಗಳ ಪೈಕಿ ಬೆಳವಾಡಿ ಕೆರೆಯು ಒಂದಾಗಿದೆ. ಈ ಕೆರೆ ಕೆಳಗೆ ಬಹಳ ಅಚ್ಚುಕಟ್ಟಿದೆ. ಮಳೆಗಾಲ ನಮೂಪವಾಗುತ್ತಿದೆ. ಆದರೆ ಕೆರೆ ರಿಪೇರಿ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಮಳೆ ಪ್ರಾರಂಭವಾದ ಮೇಲೆ ಕೆಲಸ ನಲೀಸಾಗಿ ನಡೆಯುವುದು ಕಷ್ಟ. ಇಲಾಖೆಯವರನ್ನು ಕೇಳಿದರೆ ಸರ್ಕಾರ ಜಾಗ್ರತೆಯಾಗಿ ಸಲಕರಣೆಯನ್ನೊದಗಿಸಿಲ್ಲವೆಂದು ಹೇಳುತ್ತಾರೆ. ಕೆಲಸ ಪ್ರಾರಂಭವಾಗಿ ನಡೆಯುವುದಕ್ಕೆ ಪ್ರಾರಂಭವಾಯಿತು. ಆಮೇಲೆ ಪುನಃ ಟೆಂಡರು ಕರೆಯಲು ಆರ್ಡರ್ ಆಗಿ ಟೆಂಡರು ಬಂದು ಈಗ ತಾನೆ ಕೆಲಸ ಪುರುಮಾಡಿದ್ದಾರೆ. ಮಳೆಗಾಲ ಬರುವುದರೊಳಗಾಗಿ ಪೂರ್ತಿಯಾಗುತ್ತದೆಯೋ ಇಲ್ಲವೋ ಎಂಬ ಸಂಶಯ ಬಹಳವಾಗಿದೆ. ಒಂದು ವರ್ಷ ಕೆರೆ ತುಂಬಿದರೆ 5-6 ವರ್ಷಗಳು ಅನುಕೂಲವಾಗುತ್ತದೆ. ಆದ್ದರಿಂದ ಜಾಗ್ರತೆ ರಿಪೇರಿ ಮಾಡುವುದು ಆವಶ್ಯಕ. ಅಲ್ಲದೆ ಒಡೆದು ಹೋದ ಕೆರೆಗಳ ವಿಷಯದಲ್ಲಿ ಒಡೆಯಲು ಕಾರಣವನ್ನು ಪರಿಶೀಲಿಸಿದ್ದಾರೆ. ಆದರೆ ಈ ಬೆಳವಾಡಿ ಕೆರೆಯ ವಿಷಯದಲ್ಲಿ ಪರಿಶೀಲನೆ ಮಾಡಿದವರು ಏನು ಹೇಳಿದ್ದಾರೆ? ಒಡೆದು ಹೋದುದಕ್ಕೆ ಕಾರಣ ಗೊತ್ತಾಗಿಲ್ಲ. ಕೆಲವರು ವಿಧಾನಸೌಧಕ್ಕೆ ಪಚ್ಚೆಕಲ್ಲು ತೆಗೆದುದರ ಪರಿಣಾಮ ಎಂದಿದಾರೆ. ಅಂತೂ ಕಾರಣ ಗೊತ್ತಾಗಿಲ್ಲ. ಮಳೆಗಾಲ ನಮೂಪವಾಗುವುದರೊಳಗಾಗಿ ಈ ಕೆರೆ ಕೆಲಸ ಪೂರ್ತಿ ಮಾಡಬೇಕು. ಮದಗದಕೆರೆ, ಅಯ್ಯನಕೆರೆ ಇಂಥ ಕೆರೆಗಳು ಒಡೆದು ಹೋದರೆ ಸರ್ಕಾರಕ್ಕೆ ವಿಶೇಷ ನಷ್ಟವಾಗುತ್ತದೆ. ಅವುಗಳ ಏರಿಯೂ ಗಟ್ಟಿಯಾಗಿಲ್ಲ ಎಂದು ಹೇಳುತ್ತಾರೆ. ಅದ ಕ್ಕಾಗಿ ಸರ್ಕಾರ ಸಂಸ್ಥಾನದ ಎಲ್ಲಾ ಕಡೆ ಇರುವ ಕೆರೆಗಳ ಉಸ್ತುವಾರಿ ನೋಡಿಕೊಳ್ಳಲು ತಕ್ಕ ಸಿಬ್ಬಂದಿ ನೇಮಕ ಮಾಡುವುದು ಅಗತ್ಯವಾಗಿದೆ. ಸರ್ಕಾರದ ವರು ಆದಷ್ಟು ಜಾಗ್ರತೆ ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು, ಉಪಯುಕ್ತ ಯಂತ್ರೋಪಕರಣಗಳನ್ನು ಒದಗಿಸಿ ಕೊಡಬೇಕು ಎಂದು ಪ್ರಾರ್ಥನೆಮಾಡಿ ನನ್ನ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved: "That the demand be reduced by Rs. 100".

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಹಿಂದೊಮ್ಮೆ ಒಂದು ಪ್ರಶ್ನೆ ಸಂಬಂಧದಲ್ಲಿ ಸಂಸ್ಥಾನಾಮಳೆ ಒಡೆದು ಹೋಗಿರುವ ಕೆರೆಗಳ ಸಂಖ್ಯೆಯನ್ನು ತಿಳಿಸಿದ್ದೆ. ಒಡೆದು ಹೋದ ಎಲ್ಲಾ ಕೆರೆಗಳನ್ನೂ ದುರಸ್ತು ಮಾಡಬೇಕೆಂದು ಈಗಾಗಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ, ಅಂದಾಜು ಕೂಡ ತಯಾರಾಗುತ್ತಿದೆ. ಶ್ರೀಮತಿ ಸುಬ್ಬಮ್ಮನವರು ಪ್ರಸ್ತಾಪ ಮಾಡಿರುವ ಬೆಳವಾಡಿಕೆರೆ ಒಂದು ಜೋಡೀಗ್ರಾಮದಲ್ಲಿದೆ. ಆ ಕೆರೆಯನ್ನು ನಾನು ಖುದ್ದಾಗಿ ನೋಡಿದೆ. ಹೆಚ್ಚಾಗಿ ಮಳೆ ಬಂದುದರಿಂದ ಒಡೆದುಹೋದ ಆ ಕೆರೆಯ ರಿಪೇರಿಗೆ ಈಗಾಗಲೆ ಸೂಕ್ತ ಕ್ರಮ ಕೈಕೊಳ್ಳಲಾಗಿದೆ. ಆದಷ್ಟು ಜಾಗ್ರತೆ ಒಡೆದುಹೋದ ಎಲ್ಲಾ ಕೆರೆಗಳನ್ನೂ ಮಾಡಬೇಕೆಂದು ಸರ್ಕಾರಕ್ಕೆ ಆಸೆಯಿದೆ. ಬೆಳವಾಡಿ ಕೆರೆಯ ಮಣ್ಣನ್ನು ಸಾಗಿಸಲು ಯಂತ್ರಕ್ಕೆ ಆರ್ಡರನ್ನು ಕೂಡ ಬೇಗ ಮಾಡಿ, ಅದು ಬಂದೊಡನೆ ಜಾಗ್ರತೆ ಆ ಕೆರೆ ದುರಸ್ತುಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ ಖೋತಾ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, with drawn.

Inadequate provision made for repair of tanks.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ :—

"18 ಸಾಮಾನ್ಯ ಹುಟ್ಟುವಳಿಯಿಂದ ಹಣ ವನ್ನೊದಗಿಸತಕ್ಕ ಇತರ ರೆವೆನ್ಯೂ ವೆಚ್ಚಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 61,09,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ ನೂರು ರೂಪಾಯಿಗಳನ್ನು ಕಡಮೆ ಮಾಡಬೇಕು. (ಕೆರೆಗಳ ಜೀರ್ಣೋದ್ಧಾರಕ್ಕೂ ಮತ್ತು ದುರಸ್ತಿಗಳಿಗೂ ಒದಗಿಸಿರತಕ್ಕ ಗ್ಯಾಂಟುಗಳು ಸಾಕಾಗುವಂತಿಲ್ಲವೆಂಬ ವಿಚಾರ ದಲ್ಲಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)."

ಮಾನ್ಯಮಂತ್ರಿಗಳು ಈಗ ಕೆರೆಗಳ ಜೀರ್ಣೋದ್ಧಾರಕ್ಕೂ ಮತ್ತು ರಿಪೇರಿಗೂ ಕೂಡ ಈ ನಾಲ್ಕು ವರ್ಷಗಳಿಂದ ಬಹಳ ಹಣವನ್ನು ಖರ್ಚು ಮಾಡಿದ್ದೇವೆ, ಸಾಧಿಸಿರತಕ್ಕಂಥ ಕೆಲಸ ಬಹಳ ಅಗಾಧವಾದುದು, ಬಹಳವಾಗಿ ಹೆಮ್ಮೆಪಟ್ಟು ಕೊಳ್ಳಬಹುದು ಎಂಬ ವಾದನರಣಿಯನ್ನು ಹೇಳಿದರು. ಆದರೆ ನನ್ನ ಅನುಭವದಲ್ಲಿ ಹಳ್ಳಿಗಳ ಕಡೆ ತಿರುಗುವಾಗ ಅಲ್ಲಿನ ರೈತರು ಹೇಳುತ್ತಿರುವ ದೂರುಗಳು ಮತ್ತು ಅಲ್ಲರತಕ್ಕಂಥ ಕೆರೆಗಳ ಸ್ಥಿತಿಗತಿಗಳು ಇವನ್ನು ನೋಡಿದರೆ ಈಗಲೂ ಕೂಡ ಸರ್ಕಾರದವರು ಈ ಕೆರೆಗಳ ಜೀರ್ಣೋದ್ಧಾರಕ್ಕೆ ಮತ್ತು ರಿಪೇರಿಗೆ ಸಾಕಾದಷ್ಟು ಗಮನವನ್ನು ಕೊಡುತ್ತಿಲ್ಲ, ಜನರ ನಿರೀಕ್ಷಣೆಯಂತೆ ಕೆಲಸ ನಡೆಯುತ್ತಿಲ್ಲ ಎಂದು ಖಚಿತವಾಗಿ ನಾನು ತಿಳಿಸ ಬಯಸುತ್ತೇನೆ.

ಮೈನರ್ ಕೆರೆಗಳ ಜೀರ್ಣೋದ್ಧಾರದ ಕೆಲಸ ಬಹಳ ಪ್ರಾಮುಖ್ಯವಾದುದು. ಅನೇಕ ಬಾಬುಗಳಿಗಿಂತಲೂ ಈ ಕೆರೆಗಳ ಜೀರ್ಣೋದ್ಧಾರ ಮಾಡಿದರೆ ದೇಶದ ಆರ್ಥಿಕಸ್ಥಿತಿ ಉತ್ತಮವಾಗಿ ಜನಗಳಲ್ಲೂ ಒಂದು